# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 344
2. ಸದಸ್ಯರ ಹೆಸರು : ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 10-12-2020
4. ಉತ್ತರಿಸುವವರು : ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರದಲ್ಲಿ ಇ-ತ್ಯಾಜ್ಯ ಸಂಗ್ರಹಣೆ, ವಿಲೇವಾರಿ ಮತ್ತು ಸಂಸ್ಕರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಬೆಂಗಳೂರು ನಗರದಲ್ಲಿ ಮನೆ ಮನೆಗಳಿಂದ ಸಂಗ್ರಹವಾಗುವ ಇ-ತ್ಯಾಜ್ಯದ ನಿರ್ವಹಣೆಯು ಪಾಲಿಕೆಯ ಜವಾಬ್ದಾರಿಯಾಗಿರುತ್ತದೆ. ಘನತ್ಯಾಜ್ಯ ನಿರ್ವಹಣೆ ಉಪ ನಿಯಮಗಳು 2000 ರಂತೆ ಮನೆ ಮನೆಗಳಲ್ಲಿ ಮೂಲದಲ್ಲಿಯೇ ಹಸಿತ್ಯಾಜ್ಯ, ಒಣತ್ಯಾಜ್ಯ ಮತ್ತು ಹಾನಿಕಾರಕ ತ್ಯಾಜ್ಯ ಎಂಬ ಮೂರು ವಿಧಗಳಲ್ಲಿ ತ್ಯಾಜ್ಯ ವಿಂಗಡಣೆ ಮಾಡಬೇಕಾಗಿರುತ್ತದೆ. ಈ ರೀತಿ ವಿಂಗಡಣೆಯಾದ ತ್ಯಾಜ್ಯವನ್ನು ಪ್ರತ್ಯೇಕ ವಾಹನಗಳಲ್ಲಿ ಸಂಗ್ರಹಿಸಲಾಗುತ್ತದೆ. ಮನೆ ಮನೆಗಳಿಂದ ಉತ್ಪಾದನೆಯಾಗುವ ಇ-ತ್ಯಾಜ್ಯವನ್ನು ಒಣತ್ಯಾಜ್ಯ ಸಂಗ್ರಹಣಾದಾರ ರಿಂದ ಸಂಗ್ರಹಿಸಲಾಗುತ್ತಿದ್ದು, ಸದರಿ ಇ-ತ್ಯಾಜ್ಯವನ್ನು ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳಲ್ಲಿ ಬೇರ್ಪಡಿಸಿ ಪ್ರತ್ಯೇಕವಾಗಿ ಶೇಖರಿಸಲಾಗುತ್ತದೆ. ತದನಂತರ, ಶೇಖರಿಸಲಾದ ಇ-ತ್ಯಾಜ್ಯವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅಧಿಕೃತಗೊಳಿಸಿರುವ ಏಜೆನ್ಸಿಗಳಿಂದ ಇ-ತ್ಯಾಜ್ಯವನ್ನು ವೈಜ್ಞಾನಿಕ ವಾಗಿ ಸಂಸ್ಕರಣೆ ಮತ್ತು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ | ಇ-ತ್ಯಾಜ್ಯದ ಪರದೆಗಳು, ಬ್ಯಾಟರಿ ಸೆಲ್‌ಗಳಲ್ಲಿನ ವಿಷಕಾರಕ ಅಂಶಗಳಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿರುವ ಅಂಶಗಳ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಇ-ತ್ಯಾಜ್ಯವನ್ನು E-waste (Management & Handling) Rules, 2016 ರನ್ವಯ ನಿರ್ವಹಣೆ ಮಾಡಬೇಕಾಗಿರುತ್ತದೆ. ಸದರಿ ನಿಯಮದ ಪ್ರಕಾರ ಇ-ತ್ಯಾಜ್ಯವನ್ನು Dismantler, Refurbisher ಮತ್ತು Recycler ಉದ್ದಿಮೆಗಳು ಸಂಗ್ರಹಣೆ ಮಾಡಬೇಕಾಗಿರುತ್ತದೆ. ಇದಲ್ಲದೆ, 2016ರ ಕಾಯ್ದೆಯನ್ವಯ Extended Producer Responsibility (EPR) ಅಡಿಯಲ್ಲಿ ರಾಜ್ಯದಲ್ಲಿ ಒಟ್ಟು 50 ಸಂಗ್ರಹಣಾ ಘಟಕಗಳನ್ನು ತೆರೆಯಲಾಗಿದೆ.<br><br>2018-19ನೇ ಸಾಲಿನಲ್ಲಿ 16424.6215 ಟನ್ ಇ-ತ್ಯಾಜ್ಯವನ್ನು ಸಂಗ್ರಹಿಸಲಾಗಿದ್ದು, ಇದರಲ್ಲಿ 9294.9695 ಟನ್‌ನಷ್ಟು ಉಪಯುಕ್ತ ವಸ್ತುಗಳನ್ನು ಪುನರ್ ಸಂಸ್ಕರಿಸಲಾಗಿರುತ್ತದೆ. |

. . .2/-

| | | |
|---|---|---|
| | | ಇ-ತ್ಯಾಜ್ಯ ಸಂಗ್ರಹಣೆ, ನಿರ್ವಹಣೆ ಮತ್ತು ಪುನರ್‌ಬಳಕೆ (Dismantling, recycling and refurbishing units) ಘಟಕಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿಗದಿತ ವಾಯು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳಲು ಹಾಗೂ ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ, ವಿಲೇವಾರಿ ಮಾಡಬೇಕೆಂಬ ಷರತ್ತಿನೊಂದಿಗೆ ಸಮ್ಮತಿ ಪತ್ರ ನೀಡಲಾಗಿರುತ್ತದೆ. |

ಸಂಖ್ಯೆ: ನಅಇ 247 ಎಂಎನ್‌ವೈ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ